


ಕೆಲವೇ ವರ್ಷಗಳ ಹಿಂದೆ ನಮ್ಮ ಸೀನಿಯರುಗಳು ಹಾಗಿರುತ್ತಿದ್ದರು. ಮೈಯಿಗೆ ಕಚ್ಚಿಕೊಂಡ ಬಿಗ್ಗಾಬಿಗಿ ಯೂನಿಫಾರ್ಮು, ಸೊಂಟದಿಂದ ಮೇಲೆ ಹೊಟ್ಟೆ ಶಿಖರದ ಸುತ್ತೂ ಬಳಸಿ ಎಳೆದು ಕಟ್ಟಿದ ಬೆಲ್ಟು, ಚೂಪು ಮಾಡಿ ಹುರಿಗಟ್ಟಿದ ಮೀಸೆ, ಎಡ ಕೈಯಲ್ಲಿ ಅರ್ಧ ಕೆಜಿ ತೂಗುವ ರಿಸ್ಟು ವಾಚು, ಹೆಜ್ಜೆ ಇಟ್ಟರೆ ಟಕ್ಕೂ... ಟಕ್ಕೂ... ಎಂದು ಸದ್ದು ಹೊರಡಿಸುವ ಯಾಂಕಲ್ಲು ಬೂಟುಗಳು... ಇಷ್ಟಿದ್ದರೆ ಜನ ಅವರನ್ನು ಭಯಭಕ್ತಿಯಿಂದ 'ಸರ್ಕಲ್ ಸಾಹೇಬ'ರು ಅಂತ ಕರೆಯುತ್ತಿದ್ದರು. ಜೀಪಿನಲ್ಲಿ ಆಗಾಗ ಪೇಟೆ ಬೀದಿ, ತಹಸೀಲು ಕಚೇರಿ, ನ್ಯಾಯಾಲಯ ಮತ್ತಿತರ ಕಡೆಗಳಲ್ಲಿ ದರ್ಶನ ಕೊಡುತ್ತಿದ್ದ ಆ ದಿವ್ಯಾಕೃತಿಯನ್ನು ಬಿಟ್ಟರೆ ಸಿಗುವುದಿಲ್ಲ ಎಂಬಂತೆ ತಿರುತಿರುಗಿ ನೋಡಿ ಕಣ್ಣು ತುಂಬಿಕೊಳ್ಳುತ್ತಿದ್ದರು. ರಸ್ತೆಯಲ್ಲಿ ಸಾಗುವ ಹೆಣ್ಣುಮಕ್ಕಳು ಸಾಹೇಬರ ರಥ ಅಲಿಯಾಸ್ ಜೀಪು ಎದುರು ಬಂದರೆ ಸಾಕು, ತಲೆ ಮೇಲೆ ಸೆರಗು ಹೊದ್ದುಕೊಳ್ಳುತ್ತಲೋ, ಮೈ ಮೇಲಿನ ಸೆರಗು ಸರಿಪಡಿಸಿಕೊಳ್ಳುತ್ತಲೋ ಆ ಕ್ಷಣಕ್ಕೆ ತಮಗೆ ತೋರಿದ ರೆಸ್ಪೆಕ್ಟು ನೀಡುತ್ತಿದ್ದರು. ಉಳಿದ ಸಮಯದಲ್ಲಿ ಮೈಮೇಲೆಯೇ ನುಗ್ಗಿ ಬರುವ ಲಾರಿ, ಬಸ್ಸುಗಳಂತಹ ಘನ ವಾಹನಗಳು ಸಾಹೇಬರ ಜೀಪು ಕಾಣುತ್ತಿದ್ದಂತೆ ಅದನ್ನು ಸೋಕಿದರೆಲ್ಲಿ ಕರೆಂಟು ಹೊಡೆಯುತ್ತದೋ ಅನ್ನುವಂತೆ ರಸ್ತೆ ಬದಿಗೆ ಅರುಗಾಗಿ ನಿಂತು ಜಾಗ ಮಾಡಿಕೊಡುತ್ತಿದ್ದುದು ತಮಾಷೆಯಾಗಿ ಕಾಣಿಸುತ್ತಿತ್ತು. ಲೀಡರುಗಳೆಂಬ ಹಣೆಪಟ್ಟಿ ಹೊತ್ತ ಕೆಲವರು ತಾವು ಸಾಹೇಬರಿಗೆ ಕ್ಲೋಜೆಂದು ಇತರರಿಗೆ ತೋರುವುದಕ್ಕಾಗಿ ಜೀಪನ್ನು ತಡೆದು ಮಾತಾಡಲೆತ್ನಿಸುತ್ತಿದ್ದರಾದರೂ ಅದು ಕೆಂಪು ಅಕ್ಷರದ ನಾನ್‌ಸ್ಟಾಪು ಬಸ್ಸಿನಂತೆ ಭರ್‍ರನೇ ಸಾಗಿ ಅವರಿಗೆ ನಿರಾಸೆ ಉಂಟು ಮಾಡುತ್ತಿತ್ತು.

ಇತ್ತೀಚೆಗೆ ಬಂದಿದ್ದ ಚಿತ್ತರಂಜನ ಸಾಹೇಬರು ಮೇಲೆ ಹೇಳಿದ ಪಾಯಿಂಟುಗಳೂ ಸೇರಿದಂತೆ ತಮ್ಮ ಸ್ಥಾನಕ್ಕೆ ಬೇಕಾದ ಎಲ್ಲ ದೈಹಿಕ ಅರ್ಹತೆಗಳನ್ನು ಹೊಂದಿದ್ದು ಜನರಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದ್ದರು. ಗುಲ್ಬರ್ಗಾ ಕಡೆಯವರಾದ್ದರಿಂದಲೋ ಏನೋ ಖಡಕ್ಕು ರೊಟ್ಟಿ ಹಾಗೂ ಖಾರ ಚಟ್ನಿಪುಡಿಯನ್ನು ಮೆದ್ದು ಬಲಿತಿದ್ದ ದೇಹ ಗುಂಪಿನೊಳಗಿದ್ದರೂ ಥಟ್ಟನೆ ಎದ್ದು ಕಾಣುತ್ತಿತ್ತು. ಕಲರು ಕಪ್ಪೇ ಅನ್ನಬಹುದಿತ್ತಾದರೂ ತೀರ ತೊಳೆದ ಕೆಂಡದಂತಿರಲಿಲ್ಲ. ಮುಖದ ಮೇಲಿನ ಆ ಗಾಂಭೀರ್ಯ ಜನ್ಮಜಾತವಾಗಿ ಬಂದುದೇ ಹೊರತು ಕಷ್ಟಪಟ್ಟು ತಂದುಕೊಂಡದ್ದಾಗಿರಲಿಲ್ಲ. ಇನ್ನು ಕೈಕಾಲುಗಳೂ ಸೇರಿದಂತೆ ಅವರ ದೇಹದ ಪ್ರತಿ ಅಂಗಗಳೂ ಪ್ರದರ್ಶಿಸುತ್ತಿದ್ದ ಭಂಗಿ ಭಾವಗಳ ಕುರಿತಾಗಿಯೇ ಒಂದು ರಿಸರ್ಚು ಪ್ರಬಂಧವೊಂದನ್ನು ಮಂಡಿಸಬಹುದಾಗಿತ್ತೆಂದರೆ ಊಹಿಸಿಕೊಳ್ಳಿ. 'ಹೊಸಾ ಸಾಯೇಬ್ರುನ್ನ ನೋಡೀಯೇನಲಾ... ಬರೋಬರಿ ಆರೂವರೆ ಫೂಟು... ಎದುರಿಗೆ ಬಂದು ನಿಂತ್ಕಂಡ್ರು ಅಂದ್ರೆ, ಎಂಥವನಾದ್ರೂ ಸರಿ, ಉಚ್ಚೆ ಹೊಯಕಾಬೇಕು ಅಷ್ಟೇಯಾ...' ಅಂತ ಇನ್ನಿಲ್ಲದ ಬಿಲ್ಡಪ್ಪುಗಳನ್ನು ನೀಡುವುದರ